ಕರ್ನಾಟಕ ಲೋಕಸೇವಾ ಆಯೋಗದವರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಗಳನ್ನು ನೇಮಕಾತಿ ಮಾಡುವಾಗ ಆಗಿತ್ತೆನ್ನಲಾದ ಅವ್ಯವಹಾರ

+ ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಈ ವಿಚಾರವನ್ನು ಇವ್ಹೊತ್ತು ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರಸ್ತಾಪ ಮಾಡಿದ್ದೇನೆ. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಒಂದಷ್ಟು ಜನ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್‌ಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಈ ಸೆಲೆಕ್ಟ್ ಮಾಡಿದ್ದರ ಬಗ್ಗೆ ಚರ್ಚೆ ಮಾಡಬೇಕೇ ಬೇಡವೇ ಎಂಬ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಸಭಾಧ್ಯಕ್ಷರು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೂಡ ಕೊಟ್ಟಿದ್ದರು ಇದೇ ವಿಚಾರವನ್ನು ಮೇಲ್ಮನೆಯಲ್ಲಿಯೂ ಕೂಡ ಅಲ್ಲಿಯ ಸದಸ್ಯರು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಅವರಿಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಮಾನ್ಯ ಸದಸ್ಯರುಗಳು ಹೇಳಿದ್ದನ್ನು ನಾನು ವಿಚಾರಣೆ ಮಾಡುತ್ತೇನೆ ಇದರಲ್ಲಿ ಸತ್ಯಾಂಶ ಏನಾದರೂ ಕಂಡುಬಂದರೆ ನಾನು ಆ ಲಿಸ್ಟನ್ನು ರಿಜೆಕ್ಟ್ ಮಾಡುತ್ತೇನೆ ಅವರನ್ನು ತೆಗೆದುಕೊಳ್ಳುವುದಿಲ್ಲ ಎಂಬ ಮಾತನ್ನು ಹೇಳಿದ್ದರು. ಆದರೆ ಇವ್ಹೊತ್ತು ಏನಾಗಿದೆ ಅಂದರೆ ಈ ರಿಟನ್ ಟೆಸ್ಟನ್ನು ಇವರು ಕಂಡಕ್ಟ್ ಮಾಡಿದ್ದಾರೆ. ಆ ರಿಟನ್‌ಟೆಸ್ಟ್ ಮಾರ್ಕ್ಸ್‌ಸ್ ಯಾರಿಗೆ ಹೈಯೆಸ್ಟ್ ಮಾರ್ಕ್ಸ್ ಬಂದಿದೆ ಅವರಿಗೆ ಓರಲ್‌ನಲ್ಲಿ 100 ಮಾರ್ಕ್ಸ್‌ಗೆ ಅದಕ್ಕೆ ಲೋಯಸ್ಟ್ ಮಾರ್ಕ್ಸನ್ನು ಕೊಟ್ಟಿದ್ದಾರೆ. ರಿಟನ್ ಟೆಸ್ಟ್‌ನಲ್ಲಿ ಯಾರಿಗೆ ಲೋಯಸ್ಟ್ ಇದೆ ಅವರಿಗೆ ಹೈಯೆಸ್ಟ್ ಕೊಟ್ಟು ಅಂಥವವನ್ನೆಲ್ಲಾ ಪಾಸ್ ಮಾಡಿದ್ದಾರೆ. ಇತರ ಹಿಂದೆ ದೊಡ್ಡದಾದ ಅವ್ಯವಹಾರ ನಡೆದಿದೆ ಎಂಬುದು ನಮ್ಮ ಒಂದು ಆಪಾದನೆಯಾಗಿದೆ. ಮತ್ತೆ ಇನ್ನೂ ಒಂದು ಕಾನೂನು ಇದೆ. ತಮಗೆ ಗೊತ್ತಿದೆ ಕೊನೆಯಪಕ್ಷ 25 ಮಾರ್ಕ್ಸ್ ಆನ್ನಾದರೂ ಅವರಿಗೆ ಓರಲ್‌ನಲ್ಲಿ ಕೊಡಬೇಕೆಂದು ಇದೆ. ಅದನ್ನು ಕೂಡ ಅವರು ಮಾಡಿಲ್ಲ. ಅದಕ್ಕೂ ಕಡಿಮೆ ಕೊಟ್ಟಿದ್ದಾರೆ. ಏತಕ್ಕೆಂದರೆ ರಿಟನ್ ಟೆಸ್ಟ್‌ನಲ್ಲಿ ಬಹಳ ಹೈಮಾರ್ಕ್ಸ್ ಅನ್ನು ಇವರು ತೆಗೆದುಕೊಂಡಿದ್ದ ಕಾರಣ ಅವರನ್ನು ಏನಾದರೂ ಮಾಡಿ ತಪ್ಪಿಸ ಬೇಕೆಂದು ಬಹಳ ಮ್ಯಾಕ್ಸಿಮಂ ಮಾರ್ಕ್ಸ್ ಅನ್ನು ಕೊಟ್ಟಿರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಡೀಟೈಲ್ ಸಹಿತ ತಮಗೆ ಕೊಡುವುದಕ್ಕೆ ತಯಾರಾಗಿದ್ದೇನೆ. ದಯಮಾಡಿ ಈ ಬಗ್ಗೆ ಗಮನ ಕೊಡಬೇಕು.

ತಮಗೆ ಗೊತ್ತಿರುವಂತೆ ನೇರವಾಗಿ ಅಸಿಸ್ಟೆಂಟ್ ಇಂಜಿನಿಯರ್ ಪೋಸ್ಟನ್ನು 30 ವರ್ಷಗಳ ನಂತರ ನಮ್ಮ ರಾಜ್ಯದಲ್ಲಿ ಸೆಲೆಕ್ಷನ್ ಆಗುತ್ತಿರುವುದು ಮತ್ತು ಇವು ಬಹಳ ಇಂಪಾರ್ಟೆಂಟ್ ಪೋಸ್ಟಿಂಗ್ ಎಂಬುದೂ ಗೊತ್ತಿದೆ. ಇಂಥಾದ್ದರಲ್ಲಿ ಲಕ್ಷಾಂತರ ರೂ ಅವ್ಯವಹಾರ ನಡೆದಿದೆ. ಎಂಬುದು ನಮ್ಮ ಆಪಾದನೆ. ಅದಕ್ಕಾಗಿ ನಾಳೆ ಸದನ ಮುಗಿಯುತ್ತದೆ. ತಾವು ಈವತ್ತು ಅಥವಾ ನಾಳೆ ಸರ್ಕಾರ ಆಜ್ಞೆಯ ಮೂಲಕ ಅವರೆಲ್ಲರನ್ನು ಸಹಿತ ರಿಪೋರ್ಟ್ ಮಾಡಿಕೊಳ್ಳಲು ಮೆಡಿಕಲ್ ಟೆಸ್ಟಿಗೆ ಆದೇಶವನ್ನು ಕೊಡುತ್ತಿದ್ದಾರಂತೆ ನಾವು ಇದನ್ನು ತಕ್ಷಣ ನಿಲ್ಲಸಬೇಕೆಂಬ ಆಗ್ರಹಪಡಿಸುತ್ತೇನೆ. ಈ ವಿವರಗಳನ್ನು ತಮಗೆ ಕಳಿಸಿಕೊಡುತ್ತಿದ್ದೇನೆ.

ಶ್ರೀ ಎಂ ವೀರಪ್ಪ ಮೊಯಿಲಿ : ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮಿಂದ ನಮಗೆ ಬೇಕಾಗಿರುವ ಭರವಸೆ ಇಷ್ಟೆ ಇದು ವಿಚಾರಣೆ ಮಾಡುವವರೆಗೆ ಅವರಿಗೆ ಆರ್ಡರ್ಸ್‌ನ್ನು ಕೊಡಬೇಡಿ.

ನೀವು ಇಲ್ಲಿ ಹೇಳುತ್ತೀರಿ. ವಿಚಾರಣೆ ಮಾಡಬೇಕೆಂದು ಆದರೆ ಅಲ್ಲಿ ಆರ್ಡರ್ಸ್ ಇಷ್ಯು ಮಾಡಿದರೆ.....

ಶ್ರೀ ಎಂ ವೀರಪ್ಪ ಮೊಯಿಲಿ : ಆಯಿತು ವಿಚಾರಣೆ ಮಾಡಿಸುವವರೆಗೆ ಆರ್ಡರ್ಸ್ ಇಷ್ಯು ಮಾಡಿಸುವುದಿಲ್ಲ.

ವಿಷಯ: ಕರ್ನಾಟಕ ವಿದ್ಯುತ್‌ಮಂಡಳಿಯ ಅಧ್ಯಕ್ಷರ ಆದೇಶದಿಂದ ವಿಮಾನ ನಿಲ್ದಾಣದಲ್ಲಿ ವಿದ್ಯುತ್ ನಿಲುಗಡೆಯಾಗಿದ್ದ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಭಾದ್ಯಕ್ಷಿಣಿಯವರೇ ನಾನು ತಮಗೆ ಒಂದು ಪತ್ರ ಬರೆದಿದ್ದೇನೆ ಕರ್ನಾಟಕ ವಿದ್ಯುಚಕ್ತಿ ಮಂಡಳಿಯ ಆಡಳಿತದ ಬಗ್ಗೆ ಚರ್ಚೆ ಮಾಡುವಾಗ ನಾನು ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಆ ವಿದ್ಯುಚಕ್ತಿ ಮಂಡಳಿಯ ಅಧ್ಯಕ್ಷರು ಏನು ಹಿಟ್ಟರೋ ಅಥವಾ ಕರ್ನಾಟಕ ಸರ್ಕಾರದ ಅಧೀನ ಅಥವಾ ವ್ಯಾಪ್ತಿಯಲ್ಲಿದ್ದಾರೋ ಎಂಬುದನ್ನು ತಿಳಿಸಬೇಕು. ಇಂದಿನ ಪತ್ರಿಕೆಗಳಲ್ಲಿ ಒಂದು ವರದಿ ಬಂದಿದೆ. "ವಿಮಾನ ನಿಲ್ದಾಣಕ್ಕೆ ವಿದ್ಯುತ್‌ಕಟ್ ಅಂದು ನಾನು ಇದನ್ನು ಹೇಳಿದಾಗ ಸರ್ಕಾರ ಬಹಳ ಲಘುವಾಗಿ ತೆಗೆದುಕೊಂಡರು. ಅಂದರೆ ಇಂದು ಮಂಡಲಿಯ ಅಧ್ಯಕ್ಷರ ಸಿಟ್ಟಿನ ಆದೇಶದಿಂದ ವಿಮಾನ ನಿಲ್ದಾಣದಲ್ಲಿ ಸುಮಾರು ಎರಡೂವರೆ ಗಂಟೆಗಿಂತ ಹೆಚ್ಚು ಕಾಲ ವಿದ್ಯುತ್ ಇಲ್ಲದೆ ವಿಮಾನಗಳ ಪ್ರಯಾಣಕ್ಕೂ ತೊಂದರೆ, ಹಾಗೂ ವಿಮಾನದಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೂ ಆಗಿರತಕ್ಕ ತೊಂದರೆಯನ್ನು ನಾನು ತಮ್ಮ ಮೂಲಕ ಈ ಸದನದ ಮತ್ತು ಸಂಬಂಧಪಟ್ಟ ಇಲಾಖೆ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಸೆಪ್ಟೆಂಬರ್ 26 ನೇ ತಾರೀಖು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರಾದ ಶ್ರೀ ನರಸಿಂಹಮೂರ್ತಿಯವರು ವಿದೇಶಕ್ಕೆ ಹೊರಟಿದ್ದರು. ನನಗೆ ನಿಖರವಾಗಿ ಗೊತ್ತಿಲ್ಲ. ಅವರನ್ನು ಕಳುಹಿಸುವುದಕ್ಕೆ 30 ಜನ ಹೋದಾಗ ಇವರು ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಎಂಬ ಕಾರಣಕ್ಕಾಗಿ ಆ 30 ಜನಕ್ಕೆ ಟಿಕೆಟ್ ಇಲ್ಲದೆ ಉಚಿತವಾಗಿ ಒಳಗಡೆ ಬಿಡಬೇಕು. ಅವರು ಒಂದು ದಿವಸಕ್ಕೆ ನನಗೆ ಗೊತ್ತಿರುವ ಹಾಗೆ $\frac{1}{2}$ ಯಿಂದ 13 ಸಾವಿರದವರೆಗೆ ವಸೂಲು ಮಾಡಬೇಕಾಗುತ್ತದೆ. ಅವರಿಗೆ ಕಂಟ್ರಾಕ್ಟ್ ತೆಗೆದುಕೊಂಡಿರುವವರು ಬದುಕಬೇಕಾದರೆ ಇವರನ್ನು ಬಿಡಲಿಲ್ಲವೆಂದು ಹೇಳಿ ಸಿಟ್ಟಿನ ಒಂದು ಆದೇಶ ವಿದ್ಯುಚ್ಛಕ್ತಿ ನಿಲ್ಲಿಸಿಬಿಡಿ ಎಂದು ನಾನು ಅದಕ್ಕೆ ಬೇಕಾದ ದಾಖಲೆಗಳನ್ನು ನಿಮಗೆ ಸಮಯ ಸಂದರ್ಭ ಬಂದಾಗ ಒದಗಿಸಲು ಪ್ರಯತ್ನ ಮಾಡುತ್ತೇನೆ. ಏನು ಹೇಳುತ್ತಾರೆ, ಕಳೆದ ಗುರುವಾರ ಈ ಸಭೆ ಸ್ಟೇಷನ್‌ವ್ಯಾಪ್ತಿಯಲ್ಲಿ ಬೆಳಿಗ್ಗೆ 10-30 ರಿಂದ ದುರಸ್ತಿ ಕಾರ್ಯ ಆರಂಭಿಸಲಾಗಿದೆ ವಿದ್ಯುಚ್ಛಕ್ತಿ ಕೆಡುತ್ತದೆ ದುರಸ್ತಿಯಾಗಬೇಕು. ಆದರೆ ದುರಸ್ತಿ ಕಾರ್ಯವನ್ನು ಸಬ್‌ಸ್ಟೇಷನ್ ನಿನ ಶಿಫ್ಟ್ ಇಂಜಿನಿಯರ್ ಈಶ್ವರಪ್ಪ ಬಸರ್ಗಿಯವರಿಂದ ಮುರುಗೇಶಪಾಳ್ಯದ ಸಹಾಯಕ ಇಂಜಿನಿಯರ್ ಸೋಲಂಕಿಯವರಿಂದ ವಹಿಸಿಕೊಂಡರು. ಆ ಕೆಲಸ 1.20 ರ ಹೊತ್ತಿಗೆ ಮುಗಿಯಿತು. ವಿದ್ಯುತ್ ಸರಬರಾಜನ್ನು ಮತ್ತೆ ಆರಂಭಿಸಲು ಆ ಸಮಯಕ್ಕೆ ಈ ಪ್ರಕರಣ ನಡೆಯುತ್ತದೆ. ಮಂಡಲಿಯ ಅಧ್ಯಕ್ಷರು ಅಲ್ಲಿಗೆ ಹೋಗುತ್ತಾರೆ. ಅವರನ್ನು ಕಳಿಸುವುದಕ್ಕೆ ಬಂದಿರುವ ಜನರನ್ನು ಒಳಗೆ ಬಿಡಲಿಲ್ಲ. ಅದ್ದರಿಂದ ವಿದ್ಯುಚ್ಛಕ್ತಿ ನಿಲ್ಲಿಸುತ್ತಾರೆ, ಇವೆಲ್ಲವನ್ನು ಲಾಗ್‌ಪುಸ್ತಕದಲ್ಲಿ ಆಯಾಯ ಹೊತ್ತಿಗೆ ಸರಿಯಾಗಿ ದಾಖಲೆ ಮಾಡಿದ್ದಾರೆ. ಮಂತ್ರಿಗಳು ಸಂಬಂಧ ಪಟ್ಟ ಇಂಜಿನಿಯರ್ ಆ ದಾಖಲೆಗಳನ್ನು ಈ ಸದನಕ್ಕೆ ಕೊಟ್ಟರೆ, ದಾಖಲೆಗಳನ್ನು